ಪತ್ತೆದಾರಿ ಕತೆ

# ಮುಚ್ಚಿದ ಕಿಟಕಿ



**ರವಿರಾಜ ಬೈಕಂಪಾಡಿ**

ಕಲೆ: ಮುರಳೀಧರ ರಾಠೋಡ್

ಕರಮಚಂದನಲ್ಲಿ ನಾನು ವಕೀಲಗಿರಿ ಕಲಿಯಲು ಸೇರಿಕೊಂಡ ನಾಲ್ಕನೇ ವರ್ಷವು ಬಹಳ ಚಟುವಟಿಕೆಯುಕ್ತವಾಗಿತ್ತು. ಅದೇ ವರ್ಷ ತನಿಖೆಗೆ ಬಂದ ಕಾವೇರಿ ಕನ್‌ಸ್ಟ್ರಕ್ಷನ್ ಕಂಪನಿಯ ಚುಬ್ಬಾನಾಗರಾಜುವಿನ ಪ್ರಕರಣ ನನ್ನ ನೆನಪಿನಲ್ಲಿನ್ನೂ ಹಸಿರಾಗಿಯೇ ಇದೆ.

ಸುಮಾರು ಹನ್ನೆರಡೂವರೆಯ ಹೊತ್ತಿಗೆ, ನಾನು ನ್ಯಾಯಾಲಯಕ್ಕೆ ಹೋಗುವ ತಯಾರಿಯಲ್ಲಿದ್ದೆ. ಕರಮಚಂದ ಯಥಾಪ್ರಕಾರ ಗಣಕಯಂತ್ರದಲ್ಲಿ ಮುಳುಗಿದ್ದ. ಆಗ ವ್ಯಕ್ತಿಯೊಬ್ಬ ದುಡುದುಡನೆ ಮೆಟ್ಟಿಲೇರಿ ಬರುವ ಸದ್ದು ಕೇಳಿತು. ಬಂದಾತ ಚುಬ್ಬಾನಾಗರಾಜುವೆಂದು ತನ್ನನ್ನು ಪರಿಚಯಿಸಿಕೊಂಡ. ಕಾವೇರಿ ಕಂಪನಿಯಲ್ಲಿ ಮಾರ್ಕೆಟಿಂಗ್ ವಿಭಾಗದ ಮುಖ್ಯಸ್ಥನಾಗಿದ್ದ. ಆ ಕಂಪನಿಯು ರಸ್ತೆ ನಿರ್ಮಾಣ, ಸರಕಾರಿ ಕಟ್ಟಡಗಳ ನಿರ್ಮಾಣ ಗುತ್ತಿಗೆ ವಹಿಸಿಕೊಳ್ಳುವುದಕ್ಕೆ ಹೆಸರುವಾಸಿಯಾಗಿತ್ತು. ಆತನ ಸಮಸ್ಯೆ ತುಸು ವಿಚಿತ್ರವಾಗಿತ್ತು.

ಇತ್ತೀಚೆಗೆ ಸರಕಾರದ ಕೆಲವು ದೊಡ್ಡ ಟೆಂಡರುಗಳು ಕಾವೇರಿಯ ಕೈ ತಪ್ಪಿ, ಪ್ರತಿಸ್ಪರ್ಧಿ ಕಂಪನಿಯಾದ ಮಲೆನಾಡು ಬಿಲ್ಡರ್ಸ್ ಎಂಬ ಸಂಸ್ಥೆಯ ಪಾಲಾಗಿದ್ದು, ಕಂಪನಿಯ ಪಾಲುದಾರರಿಗೆ ಇದೊಂದು ತಲೆನೋವಾಗಿತ್ತು. ತಮ್ಮ ಕಂಪನಿ ಅತಿ ಕನಿಷ್ಠ ಮೊತ್ತವನ್ನು ಬಿಡ್ ಮಾಡಿದರೂ ಮಲೆನಾಡು ಅವರಿಗಿಂತ ಕಡಿಮೆ ಬಿಡ್ ಮಾಡಿತ್ತಂತೆ. ಕೆಲವು ಬಿಡ್‌ಗಳಲ್ಲಿ ದರವು ತುಸುವೇ ಕಡಿಮೆಯಿದ್ದುದು ಅನುಮಾನಕ್ಕೆ ಕಾರಣವಾಯಿತಂತೆ. ಯಾರೋ ತಮ್ಮ ಕಂಪನಿಯ ದರವನ್ನು ಮಲೆನಾಡು ಕಂಪನಿಗೆ ತಿಳಿಸುತ್ತಿರಬೇಕೆಂದು ಪಾಲುದಾರರಿಗೆ ಸಂಶಯ. ಯಾವುದೇ ಸರ್ಕಾರಿ ಕೆಲಸಕ್ಕೆ ಬಿಡ್‌ನ್ನು ಬಹಳ